ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 1-206 ಜಿಪಅ 2020

ಕರ್ನಾಟಕ ಸರ್ಕಾರದ ಸಚಿವಾಲಯ,

ವಿಧಾನಸೌಧ,

ಬೆಂಗಳೂರು, ದಿನಾಂಕ:29.01.2021

ಸುತ್ತೋಲೆ

ವಿಷಯ: ರಾಜ್ಯದ ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳಿಗೆ 2020-21ನೇ ಸಾಲಿನ ಅಂತಿಮ ಕಂತಿನ ಅನುದಾನ ಬಿಡುಗಡೆ/ಅಪ್‌ಲೋಡ್‌ನಲ್ಲಿನ ವ್ಯತ್ಯಾಸ ಕುರಿತು

ಉಲ್ಲೇಖ: ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 1-206 ಜಿಪಅ 2020 ದಿ:9.11.2020

********

ಉಲ್ಲೇಖ(1)ರ ಆದೇಶದದತ್ತ ರಾಜ್ಯದ ಜಿಲ್ಲಾ/ತಾಲ್ಲೂಕು ಪಂಚಾಯತ್‌ಗಳ ಗಮನ ಸೆಳೆಯಲಾಗಿದೆ. ರಾಜ್ಯದ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಗೆ 2020-21ನೇ ಸಾಲಿನ ಕೊನೆಯ ಕಂತಿನ ಅನುದಾನವನ್ನು ಬಿಡುಗಡೆಗೊಳಿಸಲಾಗಿರುವುದು ಸರಿಯಷ್ಟೇ.

ಆದರೆ ಕೆಲವು ಜಿಲ್ಲಾ/ತಾಲ್ಲೂಕು ಪಂಚಾಯತಿಗಳು ಆರ್ಥಿಕ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಿರುವ ಅನುಬಂಧದ ಮತ್ತು ಖಜಾನೆ-2ರಲ್ಲಿ ಅಪ್‌ಲೋಡ್ ಆಗಿರುವ ಅನುದಾನದಲ್ಲಿ ವ್ಯತ್ಯಾಸವಾಗಿರುವುದಾಗಿ ಹಾಗೂ ವೇತನಾಂಶದಲ್ಲಿ ಕೊನೆಯ ಕಂತಿನಲ್ಲಿ ಬಿಡುಗಡೆಗೊಳಿಸಬೇಕಾಗಿರುವ ಮೊತ್ತಕ್ಕಿಂತ ಕಡಿಮೆಯಾಗಿರುವುದಾಗಿ ಹಾಗೂ ಇದೇ ರೀತಿ ಸಮಾಜ ಕಲ್ಯಾಣ ಇಲಾಖೆಯ ಕೊನೆಯ ಕಂತಿನಲ್ಲಿ ಬಿಡುಗಡೆಗೊಳಿಸಬೇಕಾಗಿದ್ದ ಅನುದಾನಕ್ಕಿಂತ ಕಡಿಮೆಯಾಗಿರುವುದಾಗಿ ತಿಳಿಸುತ್ತಾ, ವ್ಯತ್ಯಾಸದ ಮೊತ್ತವನ್ನು ಮರು ಬಿಡುಗಡೆಗೊಳಿಸಲು ಪ್ರಸ್ತಾವಿಸಿರುತ್ತಾರೆ.

ಕೊನೆಯ ಕಂತಿನ ಅನುದಾನ ಬಿಡುಗಡೆಗೊಳಿಸಿರುವ ಆದೇಶದ ಭಾಗದಲ್ಲಿ ಖಜಾನೆ-2ರಲ್ಲಿ ಅಪ್‌ಲೋಡ್ ಆಗಿರುವ ಅನುದಾನವನ್ನು ಪರಿಗಣಿಸಿ ಟಿ.ಟಿ.ಆರ್. ಮಾಡಿಕೊಳ್ಳಲು ತಿಳಿಸಲಾಗಿತ್ತು. ಕೊನೆಯ ಕಂತಿನಲ್ಲಿ ಆದೇಶದಲ್ಲಿನ ಅನುಬಂಧ ಮತ್ತು ಖಜಾನೆ-2ರ ಅಪ್‌ಲೋಡ್‌ನಲ್ಲಿ ಕೆಳಕಂಡ ಅಂಶಗಳ ನಿಮಿತ್ತ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

1. ಕೋವಿಡ್-19 ಸಾಂಕ್ರಾಮಿಕ ರೋಗದ ನಿಮಿತ್ತ ಸರ್ಕಾರ 2020-21ನೇ ಸಾಲಿನಲ್ಲಿ ನೀಡಬೇಕಾಗಿದ್ದ ತುಟ್ಟಿಭತ್ಯೆ ಹಾಗೂ ಸದರಿ ಸಾಲಿನಲ್ಲಿ ಕ್ಲೇಮು ಮಾಡಲಾಗುತ್ತಿದ್ದ ಆದ್ಯರ್ಪಣೆ ರಜೆ ನಗದೀಕರಣವನ್ನು ತಡೆಹಿಡಿದಿದ್ದರಿಂದ ವೇತನಾಂಶದಲ್ಲಿ ಪರಿಷ್ಕರಿಸಿ ಉಳಿತಾಯವನ್ನು ಗುರುತಿಸಿದೆ. ಆದರಂತೆ ಖಜಾನೆ-2 ರಲ್ಲಿಯೂ ಸಹಾ ಅಳವಡಿಸಿದೆ (ಆಬ್ಜೆಕ್ಟ್ ಹೆಡ್ 005 ಮತ್ತು 101ರಡಿ). ಆದಾಗ್ಯೂ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಂದ 2020-21ನೇ ಸಾಲಿನ ಲಿಂಕ್ ಡಾಕ್ಯುಮೆಂಟ್‌ನಂತೆ ವ್ಯತ್ಯಾಸದ ಮೊತ್ತವನ್ನು ಮರು ಬಿಡುಗಡೆಗೊಳಿಸುವಂತೆ ಪ್ರಸ್ತಾವಿಸಿರುವುದು ಸರಿಯಲ್ಲ.

2. ವೇತನಾಂಶದಲ್ಲಿ ಮೊದಲ ಮೂರು ಕಂತು ಹಾಗೂ ಕೊನೆಯ ಕಂತಿನಲ್ಲಿ ಅಪ್‌ಲೋಡ್ ಆಗಿರುವ ಮೊತ್ತಕ್ಕೆ ಕ್ರಿಯಾ ಯೋಜನೆಯನ್ನು ತಮ್ಮ ಹಂತದಲ್ಲಿಯೇ ಪರಿಷ್ಕರಿಸಿಕೊಳ್ಳುವಂತೆ ತಿಳಿಸಿದೆ.

3. 2020-21ನೇ ಸಾಲಿಗೆ ಬಾಕಿ ಇದ್ದ ಮತ್ತು ತೆರವಾದ ಹುದ್ದೆಗಳು ಭರ್ತಿಯಾದ್ದರಿಂದ ವೇತನಕ್ಕೆ ಅಗತ್ಯವಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ 2515-00-196-1-05-300 ಮತ್ತು 2515-00-197-1-10-300ರ ಲಮ್‌ಸಮ್ ಅನುದಾನದಿಂದ ಬಿಡುಗಡೆಗೊಳಿಸುತ್ತಿದ್ದು, ಪ್ರಸ್ತಾವಿತ ಕಾರ್ಯಕ್ರಮದಡಿ ಬಿಡುಗಡೆಗೊಳಿಸಿರುವ ಅನುದಾನವನ್ನು ಹೆಚ್ಚುವರಿ ಅನದಾನವೆಂದು ಪರಿಗಣಿಸಬೇಕಾಗಿದ್ದು ಖಜಾನೆ-2ರಲ್ಲಿ ಇದನ್ನು ಅಳವಡಿಸಲಾಗಿದೆ. ಆದಾಗ್ಯೂ ಖಜಾನೆ-2ರಲ್ಲಿ ಲಭ್ಯವಿರುವ ಅನುದಾನ ಅಪ್‌ಲೋಡ್ ಆಗಿದ್ದರೂ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಲ್ಲಿ ಬಿಡುಗಡೆಗೊಳಿಸಿರುವ ಅನುದಾನ ಖಜಾನೆ-2ರಲ್ಲಿ ತೋರುತ್ತಿಲ್ಲವೆಂದು ಅನೇಕ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಂದ ಪತ್ರಗಳು ಸ್ವೀಕೃತವಾಗುತ್ತಿದ್ದು ಇದರಿಂದ ಕ್ಲುಪ್ತ ವೇಳೆಯೊಳಗೆ ಅನುದಾನವನ್ನು ವೆಚ್ಚ ಮಾಡಲಾಗದೆ ವ್ಯಪಗತವಾಗುವುದನ್ನು ಹಾಗೂ ಮುಂದಿನ ಆರ್ಥಿಕ ವರ್ಷದಲ್ಲಿ ಇದೇ ಉದ್ದೇಶಕ್ಕಾಗಿ ಹೆಚ್ಚುವರಿ ಅನುದಾನ ಕೋರಿ ಪ್ರಸ್ತಾವನೆಗಳು ಸ್ವೀಕೃತವಾಗುವ ಹಿನ್ನೆಲೆಯಲ್ಲಿ ಖಜಾನೆ-2ರಲ್ಲಿ ಲಭ್ಯಪಡಿಸುವಂತೆ ತಿಳಿಸಲಾಗಿದೆ.

4. ಬಿಡುಗಡೆಗೊಳಿಸಿರುವ ಅನುದಾನ ಹಾಗೂ ಆದೇಶದ ಅನುಬಂಧದಲ್ಲಿ ಯಾವುದು ಕಡಿಮೆಯೋ ಅದನ್ನು ಖಜಾನೆ-2ರಲ್ಲಿ ಅಳವಡಿಸಲು ತಿಳಿಸಿದ್ದು ಕೆಲವೊಂದು ಲೆಕ್ಕ ಶೀರ್ಷಿಕೆಗಳಡೆ ಅತಿ ಹೆಚ್ಚು ಅಥವಾ ಅತೀ ಕಡಿಮೆ ಲಭ್ಯವಾಗಿದ್ದು ಇದನ್ನು ಖಜಾನೆ-2ರನ್ವಯ ಅಪ್‌ಲೋಡ್ ಮಾಡಲಾಗಿದೆ. ಮೇಲೆ (1)ರ ಕಂಡಿಕೆಯಲ್ಲಿ ವಿವರಿಸಿರುವಂತೆ 2020-21ನೇ ಸಾಲಿನ ವೇತನಾಂಶಗಳಲ್ಲಿ ಉಳಿತಾಯವನ್ನು ಗುರುತಿಸಿರುವುದರಿಂದ ಆಯವ್ಯಯದಲ್ಲಿ ಒಟ್ಟಾರೆ ಒದಗಿಸಿರುವ ಅನುದಾನದ ಶೇಕಡ 8 ರಿಂದ 10%ರ ವ್ಯತ್ಯಾಸವಾಗಬೇಕಾಗಿದ್ದು ಇದಕ್ಕಿಂತ ಹೆಚ್ಚಿನ ಮೊತ್ತ ಹೆಚ್ಚು ಅಪ್‌ಲೋಡ್ ಆಗಿರುವ ಕಡೆ ಜಿಲ್ಲಾ/ತಾಲ್ಲೂಕು ಪಂಚಾಯತಿಗಳು ಖಜಾನೆ-2ರ ಅಪ್‌ಲೋಡ್ ಅನ್ವಯ ಟಿ.ಟಿ.ಆರ್. ಮಾಡಿಕೊಂಡಿದಲ್ಲಿ ಅದನ್ನು ಹಿಂಪಡೆಯಲು ಸಾಧ್ಯವಿರುವುದಿಲ್ಲ ಒಂದು ವೇಳೆ ಟಿ.ಟಿ.ಆರ್. ಮಾಡಿಕೊಂಡಿರದ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಲೆಕ್ಕ ಶೀರ್ಷಿಕೆಗಳಡಿ ಸರ್ಕಾರದ ಆದೇಶದ ಅನುಬಂಧಕ್ಕೆ ಸೀಮಿತಗೊಳಿಸಿ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಗೆ ಖಜಾನೆ-2ರಲ್ಲಿ ಅನುದಾನ ಲಭ್ಯಪಡಿಸಲು ಖಜಾನೆ-2 ಕ್ರಮವಹಿಸತಕ್ಕದ್ದು.

5. ಆಯವ್ಯಯದಲ್ಲಿ ಒಟ್ಟಾರೆ ಒದಗಿಸಿರುವ ಅನುದಾನದ ಶೇಕಡ 8 ರಿಂದ 10%ಕ್ಕಿಂತ ಕಡಿಮೆ ಅಪ್‌ಲೋಡ್ ಆಗಿರುವ ಹಾಗೂ ಇದಕ್ಕಿಂತ ಹೆಚ್ಚಿನ ಮೊತ್ತದ ವ್ಯತ್ಯಾಸವಿರುವಲ್ಲಿ ಕೂಡಲೇ ಆರ್ಥಿಕ ಇಲಾಖೆಯ ಗಮನಕ್ಕೆ ತಂದಲ್ಲಿ ಅಗತ್ಯತೆಯನ್ನು ಪರಿಶೀಲಿಸಿ ಖಜಾನೆ-2ರಲ್ಲಿ ಅನುದಾನ ಲಭ್ಯವಿದ್ದಲ್ಲಿ ಮಾತ್ರ ಸೂಕ್ತ ಆದೇಶವನ್ನು ಹೊರಡಿಸಿ ಅಪ್‌ಲೋಡ್ ಮಾಡಲಾಗುವುದು.

6. ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ವಿದ್ಯಾರ್ಥಿ ನಿಲಯಗಳು ಕೋವಿಡ್-19 ಸಾಂಕ್ರಾಮಿಕ ರೋಗದ ನಿಮಿತ್ತ ಕಾರ್ಯನಿರ್ವಹಿಸಿರದ ಕಾರಣ ವೇತನೇತರ/ನಿರ್ವಹಣಾ ವೆಚ್ಚದಲ್ಲಿ ಉಳಿತಾಯವನ್ನು ಗುರುತಿಸಿ ಅದನ್ನು ಆರ್ಥಿಕ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚಾರ ಪಡಿಸಿದೆ. ಆದಾಗ್ಯೂ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಂದ ಲಿಂಕ್ ಡಾಕ್ಯುಮೆಂಟ್ ಅನ್ವಯ ವ್ಯತ್ಯಾಸದ ಅನುದಾನವನ್ನು ಮರು ಬಿಡುಗಡೆಗೊಳಿಸುವಂತೆ ಪ್ರಸ್ತಾವನೆಯನ್ನು ಪರಿಶೀಲಿಸಲು ಸಾಧ್ಯವಿರುವುದಿಲ್ಲ. ಆದ್ದರಿಂದ ಪ್ರಸಕ್ತ ಸಾಲಿನಲ್ಲಿ ಬಿಡುಗಡೆಗೊಳಿಸಿದ/ಬಿಡುಗಡೆಗೊಳಿಸುವ ಅನುದಾನಕ್ಕೆ ಸೀಮಿತಗೊಳಿಸಿ ಪರಿಷ್ಕೃತ ಕ್ರಿಯಾ ಯೋಜನೆಯನ್ನು ಅನುಮೋದನೆ ಪಡೆಯುವಂತೆ ತಿಳಿಸಿದೆ.

7. ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಅಳವಡಿಸಿದ ಆಬ್ಜೆಕ್ಟ್ ಹೆಡ್ 033, 034 ಮತ್ತು 251ರಡಿಯ ಲೆಕ್ಕ ಶೀರ್ಷಿಕೆಗಳಡಿ ಅನುದಾನವನ್ನು ಬಿಡುಗಡೆಗೊಳಿಸಿ/ಮರು ಹೊಂದಾಣಿಕೆ ಮಾಡಲಾಗಿದ್ದರೂ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಂದ ಖಜಾನೆ–2ರಲ್ಲಿ ತೋರುತ್ತಿಲ್ಲವೆಂದು ಪ್ರಸ್ತಾವನೆಗಳು ಸ್ವೀಕೃತವಾಗುತ್ತಿರುವುದರಿಂದ ಖಜಾನೆ–2ರ ಪ್ರಾಜೆಕ್ಟ್ ಡೈರಕ್ಟರ್/ಪ್ರಾಜೆಕ್ಟ್ ಮ್ಯಾನೇಜರ್/ಖಜಾನೆ–2ರ ಮುಖ್ಯಸ್ಥರು ತ್ವರಿತವಾಗಿ ಕ್ರಮವಹಿಸಿ ಕ್ಲುಪ್ತ ವೇಳೆಯೊಳಗೆ ಬಿಡುಗಡೆಗೊಳಿಸಿದ/ಮರು ಹೊಂದಾಣಿಕೆಗೊಳಿಸಿದ ಅನುದಾನವನ್ನು ಖಜಾನೆ–2ರಲ್ಲಿ ಲಭ್ಯಪಡಿಸಿ ಅವಶ್ಯವಿದ್ದಲ್ಲಿ ಮ್ಯಾಪಿಂಗ್ ಆಗದೆ ಇದ್ದಲ್ಲಿ ಮ್ಯಾಪಿಂಗ್ ಮಾಡುವುದು ಹಾಗೂ ನಿಗಧಿತ ಅವಧಿಯೊಳಗೆ ವೆಚ್ಚ ಮಾಡಲು ಅನುವು ಮಾಡುವಂತೆ ತಿಳಿಸಿದೆ.

8. ಖಜಾನೆ–2ರಲ್ಲಿ ತಾಂತ್ರಿಕ ತೊಂದರೆಗಳಿದ್ದಲ್ಲಿ ಜಿಲ್ಲಾ/ತಾಲ್ಲೂಕು ಪಂಚಾಯತಿಗಳು ಟಿಕೆಟ್ ಅನ್ನು ಸೃಜಿಸಿ ಖಜಾನೆ–2ಕ್ಕೆ ಕಳುಹಿಸಿ ನಿರಂತರ ಸಂಪರ್ಕದೊಂದಿಗೆ ಅನಾನುಕೂಲತೆಯನ್ನು ಪರಿಹರಿಸಿಕೊಳ್ಳುವಂತೆ ತಿಳಿಸಿದೆ.

9. ಕೆಲವು ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ನಿರ್ವಹಣಾ ಪ್ರಧಾನ ಲೆಕ್ಕ ಶೀರ್ಷಿಕೆ 2515ರಡಿ ಅನುದಾನ ಬಿಡುಗಡೆಗೊಳಿಸಿ/ಅಪ್‌ಲೋಡ್ ಆಗಿದ್ದರು ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಖಜಾನೆ–2ರ ಪರದೆಯಲ್ಲಿ ತೋರುತ್ತಿಲ್ಲವೆಂಬ ಪ್ರಸ್ತಾವನೆಗಳು ಸ್ವೀಕೃತವಾಗುತ್ತಿರುವ ಹಿನ್ನೆಲೆಯಲ್ಲಿ ಖಜಾನೆ–2ರ ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಕ್ರಮವಹಿಸುವಂತೆ ತಿಳಿಸಿದೆ.

ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಕ್ರಮವಹಿಸಿ ಬಿಡುಗಡೆಗೊಳಿಸಿರುವ ಅನುದಾನವನ್ನು ಕ್ಲುಪ್ತ ವೇಳೆಯೊಳಗೆ ವೆಚ್ಚ ಮಾಡಲು ಕ್ರಮವಹಿಸತಕ್ಕದ್ದು, ಒಂದು ವೇಳೆಯಲ್ಲಿ ಬಿಡುಗಡೆಗೊಳಿಸಿ/ಲಭ್ಯವಿರುವ ಅನುದಾನ ವ್ಯಪಗತವಾದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನೇ ಪೂರ್ಣ ಹೊಣೆಗಾರರಾಗುವುದಲ್ಲದೆ ಅಂತಹ ವಿರುದ್ಧ ಕ್ರಮವಹಿಸಲಾಗುವುದು ಹಾಗೂ ಯಾವುದೇ ಕಾರಣಕ್ಕೂ ಮತ್ತೊಮ್ಮೆ ಹೆಚ್ಚುವರಿ ಅನುದಾನವನು ಬಿಡುಗಡೆಗೊಳಿಸಲಾಗುವುದಿಲ್ಲವೆಂದು ತಿಳಿಸಿದೆ.

(ಪುರುಷೋತ್ತಮ್ ಸಿಂಗ್ ಬಿ.ಹೆಚ್.)
ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ

1. ಮಹಾಲೇಖಪಾಲರು(ಎ.&ಇ) ಕರ್ನಾಟಕ, ಬೆಂಗಳೂರು
2. ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯರ್ಶಿಗಳು,
3. ಪ್ರಧಾನ ಕಾರ್ಯದರ್ಶಿಗಳು(ಖಜಾನೆ–2), 7ನೇ ಮಹಡಿ, ವಾಣಿಜ್ಯ ತೆರಿಗೆ ಇಲಾಖೆಗಳ ಕಟ್ಟಡ,ಗಾಂಧಿನಗರ, ಬೆಂಗಳೂರು–
4. ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ, ಕೆಪಿಟಿಸಿಎಲ್ ಕಟ್ಟಡ, ಡ್ರಗ್ಸ್ ಕಂಟ್ರೋಲ್ ಇಲಾಖೆ ಕಾಂಪೌಂಡ್, ಅರಮನೆ ರಸ್ತೆ, ಬೆಂಗಳೂರು
5. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ/ಮುಖ್ಯ ಲೆಕ್ಕಾಧಿಕಾರಿಗಳು
6. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ
7. ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜಭವನ, ಬೆಂಗಳೂರು
8. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು
9. ರಾಜ್ಯದ ಎಲ್ಲಾ ಜಿಲ್ಲಾ/ಉಪ ಖಜಾನೆ ಅಧಿಕಾರಿಗಳು
10. ರಕ್ಷಾ ಕಡತಕ್ಕೆ
11. ಹೆಚ್ಚುವರಿ ಪ್ರತಿ